


# ಪಿಂಗಾಣಿಯ ಅಪೂರ್ವ ಕಲಾಲೋಕ

ದುಬಾರಿ ಎನ್ನಿಸಿಕೊಂಡರೂ ಪಿಂಗಾಣಿ ತನ್ನ ಕಲಾತ್ಮಕ ಸೌಂದರ್ಯದಿಂದ ಇವತ್ತಿಗೂ ಆಕರ್ಷಣೀಯ.

■ ಚಿತ್ರ– ಲೇಖನ: **ಸೀಮಾ ಕುಲಕರ್ಣಿ**

**ಚ**ಹಾದ ಕಪ್ಪಿನಿಂದ ಹಿಡಿದು, ಸ್ನಾನದ ಮನೆಯವರೆಗೆ ಪಿಂಗಾಣಿ ಬಳಸುವುದರಿಂದ ಇದು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ವಿದೇಶಗಳಲ್ಲಿ ಪಿಂಗಾಣಿ ಪ್ರೀತಿಯ ಅಭಿವ್ಯಕ್ತಿಯೂ ಹೌದು. ಏಷ್ಯಾದ ದಕ್ಷಿಣ ಪೂರ್ವ ದೇಶಗಳಲ್ಲಿ ಇದೊಂದು ಪುರಾತನ ಶ್ರೀಮಂತ ಪರಂಪರೆಯ ಮುಂದುವರಿಕೆಯಂತೆ ಇದೆ.

ಪಿಂಗಾಣಿ ವಸ್ತುಗಳು ತಮ್ಮ ಕಲೆ, ಆಕಾರ ಹಾಗೂ ಸೃಜನಶೀಲ ಪರಿಕಲ್ಪನೆಯಿಂದ ಗಮನ ಸೆಳೆಯುತ್ತವೆ. ಪಿಂಗಾಣಿ ಮಣ್ಣಿನ ವಸ್ತುಗಳು ಇಲ್ಲದೆ ಯಾವ ಉತ್ಸವಗಳೂ, ಸಮಾರಂಭಗಳೂ ವಿಜೃಂಭಿಸುವುದೇ ಇಲ್ಲ. ಚೀನಾ ಹೊಸ ವರ್ಷದ ಮುನ್ನಾದಿನ ಸಿಂಗಾಪುರದ ಉಪನಗರಗಳ ದಾರಿಗುಂಟ ಪಿಂಗಾಣಿ ವಸ್ತುಗಳ ತಾತ್ಕಾಲಿಕ ಅಂಗಡಿಗಳು ಒಮ್ಮೆಲೇ ಹುಟ್ಟಿಕೊಳ್ಳುತ್ತವೆ.

ಚೀನಾ ಹೊಸ ವರ್ಷದ ಆಚರಣೆಗೆಂದೇ ಝಿಂಗ್ದೇಝೇನ್ ಮತ್ತು ಅದರ ದಕ್ಷಿಣ ಮಧ್ಯೆಯ ಪ್ರಾಂತ್ಯಗಳಿಂದ ಪಿಂಗಾಣಿ ವಸ್ತುಗಳನ್ನು ಹೇರಳವಾಗಿ ರಫ್ತು ಮಾಡುತ್ತಾರೆ. ಈ ಅಂಗಡಿಗಳಲ್ಲಿ ಭಾರೀ ಆಕಾರದ ಕಲಾತ್ಮಕ ಹೂಜಿಗಳು, ದೇವರ ವಿಗ್ರಹಗಳು, ಹೂದಾನಿಗಳು, ಪಾರಂಪರಿಕ ವಸ್ತುಗಳು ಮತ್ತು ಸ್ನಾನಗೃಹಗಳಲ್ಲಿ ಬಳಸಲಾಗುವ ಸಾಮಗ್ರಿಗಳು, ಭೋಜನದ ಟೇಬಲ್ ಮೇಲೆ ಬಳಸುವ ಉಪಕರಣಗಳು, ಪ್ಯಾಷನೇಬಲ್ ಆಭರಣಗಳು. ಸಾಂಪ್ರದಾಯಿಕ ವಸ್ತುಗಳು, ಚಹಾದಾನಿ, ಮಗ್ಗು, ನೀರಿನ ಪಾತ್ರೆ, ಗೃಹಾಲಂಕಾರ ವಸ್ತುಗಳು ಮತ್ತು ಮೌನ ಚಿತ್ರಗಳು– ಹೀಗೆ ಎಲ್ಲವೂ ಮಾರಾಟವಾಗುತ್ತವೆ.

ಹೊಸ ವರ್ಷದ ಹಬ್ಬದಾಚರಣೆಯಲ್ಲಿ ವರ್ಷವಿಡೀ ಬಳಸಿದ ಹಳೆಯ ಪಿಂಗಾಣಿ ವಸ್ತುಗಳಿಗೆ ವಿದಾಯ ಹೇಳಿ ಹೊಸವನ್ನು ಕೊಂಡು ತರುವ ಪರಂಪರೆ ಚೀನೀಯರದ್ದು! ಪಿಂಗಾಣಿ ಪಾತ್ರೆಯಲ್ಲಿ ಸಂಗ್ರಹಿಸುವ ಆಹಾರ ಪದಾರ್ಥಗಳು ಬಹಳ ಸಮಯ ಕೆಡದಂತೆ ಇಡಲು ಸಾಧ್ಯವಾಗುತ್ತದೆ. ಈ ಪಾತ್ರೆಗಳನ್ನು ತೊಳೆಯುವುದೂ ಸುಲಭ. ತೊಳೆದ ಪಾತ್ರೆಗಳಲ್ಲಿ ಆಹಾರ ಪದಾರ್ಥದ ವಾಸನೆಯೂ ಉಳಿಯಲಾರದು. ಹೀಗಾಗಿಯೇ ಜನರು ಗ್ಲಾಸು ಮತ್ತು ಪ್ಲಾಸ್ಟಿಕ್ಕಿನ ಉಪಕರಣಗಳು ಬರುವ ಮುನ್ನ ಬಹುತೇಕ ಪಿಂಗಾಣಿ ವಸ್ತುಗಳನ್ನೇ ಬಳಸಲು ಬಯಸುತ್ತಿದ್ದರು. ಇದಕ್ಕೆ ಒಂದು ಉತ್ತಮ ಉದಾಹರಣೆಯೆಂದರೆ ಭಾರತದ ಅನೇಕ ಸ್ಥಳಗಳಲ್ಲಿ ಪರಂಪರಾಗತ ಬಳಕೆಯಾಗುವ ಉಪ್ಪಿನಕಾಯಿಯ ಭರಣಿಗಳು ಪಿಂಗಾಣಿ ಮಣ್ಣಿನದೇ ಆಗಿ ಇಂದಿಗೂ ಉಳಿದಿವೆ.

(17ನೇ ಪುಟ ನೋಡಿ)